ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ-1

MARCH/APRIL 2025 EXAMINATION-1

**A**

**CCE RF/PF**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12

[ Total No. of Printed Pages : 12

[ ಒಟ್ಟು ಪ್ರಶ್ನೆಗಳ ಸಂಖ್ಯೆ : 38

[ Total No. of Questions : 38

**ಸಂಕೇತ ಸಂಖ್ಯೆ : 85-E** **Code No. : 85-E**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**( ಆಂಗ್ಲ ಮಾಧ್ಯಮ / English Medium )**

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ)**

**( Regular Fresh / Private Fresh )**

ದಿನಾಂಕ : 29. 03. 2025 ] [ Date : 29. 03. 2025

ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-00 A.M. to 1-15 P.M.

ಗರಿಷ್ಠ ಅಂಕಗಳು : 80 ] [ Max. Marks : 80

**Cut here / ಇಲ್ಲಿ ಕತ್ತರಿಸಿ**

## General Instructions to the Candidate :

1. This question paper consists of 38 questions.
2. This question paper has been sealed by reverse jacket. ***You have to cut on the right side to open the paper*** at the time of commencement of the examination ***( Follow the arrow mark )***. **Do not cut the left side to open the paper.** Check whether all the pages of the question paper are intact.
3. Follow the instructions given against the questions.
4. Figures in the right hand margin indicate maximum marks for the questions.
5. The maximum time to answer the paper is given at the top of the question paper. It includes 15 minutes for reading the question paper.
6. Ensure that the Version of the question paper distributed to you and the Version printed on your admission ticket is the same.



ಇಲ್ಲಿ ಹರಿಯಿರಿ

**TEAR HERE TO OPEN THE QUESTION PAPER**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಹರಿಯಿರಿ

**Tear here**

I. ***Four*** **choices are given for each of the following questions / incomplete statements. Choose the correct answer and write the complete answer along with its letter of alphabet.** **8 × 1 = 8**

1. The policy of not joining any power bloc is

   (A) Blue water policy

   (B) Racial discrimination policy

   (C) Non-Alignment policy

   (D) Human Rights policy

2. The progress of Horticultural field is called as

   (A) Yellow Revolution

   (B) Golden Revolution

   (C) Blue Revolution

   (D) Red Revolution

3. The reason to call 'Mumbai' as Manchester of India is

(A) It has highest cotton mills

(B) It is the centre of Information Technology

(C) It is famous for Sugar industry

(D) It is famous for Aluminium industry

4. Unorganised workers among the following are

(A) Domestic servants

(B) Police

(C) Bank employees

(D) Insurance employees

5. In order to provide separate representation for Muslims "Separate Electorate College" was created by

   (A) Charter Act of 1833

   (B) Indian Councils Act of 1892

   (C) Government of India Act of 1935

   (D) Indian Councils Act of 1909

6. Non-planned expenditure among the following is

   (A) Agricultural expenditure

   (B) Transport expenditure

   (C) Defence expenditure

   (D) Educational expenditure

7. In the case of compensation to the consumers more than Rs. 10 crore, the complaint has to be submitted to

(A) The District Commission (B) The State Commission

(C) The Taluk Commission (D) The National Commission

8. 'Mahad Tank' and 'Kalaram' movements were started by Dr. B. R. Ambedkar to

(A) prove that the untouchables had been denied basic facilities

(B) work towards the progress of agricultural labours

(C) demand for the separate electoral constituencies for untouchables

(D) publish 'Prabuddha Bharata' and 'Mukanayaka'

**II.** **Answer the following questions in a sentence each :** **8 × 1 = 8**

9. Which place has recorded the highest temperature in our country ?

10. What is female foeticide ?

11. In which type of Bank account any number of transations can be made in a day ?

12. Why is Decentralisation of power needed ?

13. Which section of our constitution prohibits the practice of untouchability ?

14. What is public administration according to Woodrow Wilson ?

15. Where is Teen Murthi Haifa Chowk located ?

16. Who is known as 'Iron man of India' ?

**III.** **Answer the following questions in *two* to *four* sentences / points each :** **8 × 2 = 16**

17. What are the measures undertaken to eliminate discrimination of gender minorities ?

**OR**

What are the functions of UNESCO ?

18. How are mobs different from riots ?

**OR**

How can we prevent child marriage ?

19. How did the battle of Buxar make the British the real power holders of Bengal ?

20. How was Goa liberated from the Portuguese ?

21. What are the differences between GIS and GPS ?

22. What are the outstanding achievements of ISRO ?

23. Name the housing programmes taken up by the Government for shelterless people.

24. How is Entrepreneurship a creative activity ?

**IV. Answer the following questions in *six* sentences / points each :**

**9 × 3 = 27**

25. Explain the social reforms of Swamy Dayananda Saraswathi.

**OR**

Explain the conditions of Subsidiary Alliance.

26. Forests are most useful sources. Justify.

**OR**

Multi-purpose river valley projects are very essential for the development of the nation. Justify.

27. What are the objectives of Five Year Plans ?

**OR**

Which are the Non-tax revenue sources of Central Government ?

28. What are the functions of Bank ?

**OR**

What are the methods to be followed to file a case in the Consumer Court ?

29. What were the results of the World War II ?

30. How did the British land tax system exploit Indian farmers ?

31. Make a list of programmes implemented to eradicate illiteracy.

32. What are the effects of child labour ?

33. How can the soil erosion be prevented ?

**V. Answer the following questions in about *eight* sentences / points each :** **4 × 4 = 16**

34. Explain the achievements of Krishnaraja Wodeyar IV.

**OR**

Explain the causes for the failure of the first war of Indian Independence.

35. "The role of Subhash Chandra Bose in the freedom struggle of India is a milestone." Justify.

36. Explain the achievements of United Nations.

37. Explain the causes for the floods.

**VI.** 38. **In the outline map of India provided to you, mark any *five* among the following :** **5 × 1 = 5**

a) Coromandel Coast

b) 82° 30′ Eastern longitude

c) Hirakud

d) Rana Pratap Sagar

e) River Narmada

f) Kanyakumari

g) Vishakhapatnam.

***Alternative Question for Visually impaired Candidates only :***

**( In lieu of Q. No. 38 )** **5**

What are the uses of Himalayan Mountains ?

DO NOT WRITE ANYTHING HERE

ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ-1

MARCH/APRIL 2025 EXAMINATION-1

**A**

**CCE RF/PF**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12

[ Total No. of Printed Pages : 12

[ ಒಟ್ಟು ಪ್ರಶ್ನೆಗಳ ಸಂಖ್ಯೆ : 38

[ Total No. of Questions : 38

**ಸಂಕೇತ ಸಂಖ್ಯೆ : 85-K** **Code No. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ)**

**(Regular Fresh / Private Fresh)**

ದಿನಾಂಕ : 29. 03. 2025 ] [ Date : 29. 03. 2025

ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-00 A.M. to 1-15 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ).*** **ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಇವೆರಡೂ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 8 × 1 = 8**

1. ವಿಶ್ವದ ಯಾವುದೇ ಶಕ್ತಿ ಬಣಕ್ಕೆ ಸೇರದ ನೀತಿಯು

(A) ನೀಲಿ ನೀರಿನ ನೀತಿ

(B) ವರ್ಣಬೇಧ ನೀತಿ

(C) ಅಲಿಪ್ತ ನೀತಿ

(D) ಮಾನವ ಹಕ್ಕುಗಳ ನೀತಿ

2. ತೋಟಗಾರಿಕೆ ಬೇಸಾಯದ ಪ್ರಗತಿಯು ಕರೆಯಲ್ಪಡುವುದು

(A) ಹಳದಿ ಕ್ರಾಂತಿ ಎಂದು

(B) ಸುವರ್ಣ ಕ್ರಾಂತಿ ಎಂದು

(C) ನೀಲಿ ಕ್ರಾಂತಿ ಎಂದು

(D) ಕೆಂಪು ಕ್ರಾಂತಿ ಎಂದು

3. 'ಮುಂಬೈ' ಅನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯಲು ಕಾರಣ

(A) ಇದು ಅತಿ ಹೆಚ್ಚು ಹತ್ತಿ ಗಿರಣಿಗಳನ್ನು ಹೊಂದಿದೆ

(B) ಇದು ಮಾಹಿತಿ ತಂತ್ರಜ್ಞಾನದ ಕೇಂದ್ರವಾಗಿದೆ

(C) ಇದು ಸಕ್ಕರೆ ಕೈಗಾರಿಕೆಗೆ ಪ್ರಸಿದ್ಧವಾಗಿದೆ

(D) ಇದು ಅಲ್ಯುಮಿನಿಯಂ ಕೈಗಾರಿಕೆಗೆ ಪ್ರಸಿದ್ಧವಾಗಿದೆ

4. ಇವುಗಳಲ್ಲಿ ಅಸಂಘಟಿತ ಕೆಲಸಗಾರರು

(A) ಮನೆಕೆಲಸಗಾರರು

(B) ಪೊಲೀಸರು

(C) ಬ್ಯಾಂಕ್ ನೌಕರರು

(D) ವಿಮಾ ಕಂಪನಿ ನೌಕರರು

5. ಮುಸ್ಲಿಮರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ 'ಪ್ರತ್ಯೇಕ ಚುನಾವಣಾ ಮತಗಟ್ಟೆ' ವ್ಯವಸ್ಥೆಯನ್ನು ಜಾರಿಗೆ ತಂದದ್ದು

(A) 1833 ರ ಚಾರ್ಟರ್ ಕಾಯ್ದೆ

(B) 1892 ರ ಭಾರತೀಯ ಪರಿಷತ್ ಕಾಯ್ದೆ

(C) 1935 ರ ಭಾರತ ಸರ್ಕಾರದ ಕಾಯ್ದೆ

(D) 1909 ರ ಭಾರತೀಯ ಪರಿಷತ್ ಕಾಯ್ದೆ

6. ಇವುಗಳಲ್ಲಿ ಯೋಜನೇತರ ವೆಚ್ಚವು

(A) ಕೃಷಿ ವೆಚ್ಚ

(B) ಸಾರಿಗೆ ವೆಚ್ಚ

(C) ರಕ್ಷಣಾ ವೆಚ್ಚ

(D) ಶೈಕ್ಷಣಿಕ ವೆಚ್ಚ

7. ಗ್ರಾಹಕರಿಗೆ ಪರಿಹಾರ ಮೊತ್ತವು ರೂ. 10 ಕೋಟಿಗಿಂತ ಹೆಚ್ಚಾದರೆ ದೂರನ್ನು ಸಲ್ಲಿಸಬೇಕಾದ ಗ್ರಾಹಕರ ಆಯೋಗ

(A) ಜಿಲ್ಲಾ ಆಯೋಗ

(B) ರಾಜ್ಯ ಆಯೋಗ

(C) ತಾಲೂಕು ಆಯೋಗ

(D) ರಾಷ್ಟ್ರೀಯ ಆಯೋಗ

8. ಮಹದ್ ಕೆರೆ ಮತ್ತು ಕಾಲಾರಾಂ ಚಳವಳಿಗಳನ್ನು ಡಾ. ಬಿ.ಆರ್. ಅಂಬೇಡ್ಕರ್‌ರವರು ರೂಪಿಸಿದ್ದು

(A) ಅಸ್ಪೃಶ್ಯರು ಕನಿಷ್ಠಮಟ್ಟದ ಅವಕಾಶಗಳಿಂದ ವಂಚಿತರಾಗಿರುವುದನ್ನು ನಿರೂಪಿಸಲು

(B) ಕೃಷಿ ಕಾರ್ಮಿಕರ ಏಳಿಗೆಗೆ ದುಡಿಯಲು

(C) ಅಸ್ಪೃಶ್ಯರಿಗೆ ಪ್ರತ್ಯೇಕ ಮತ ಕ್ಷೇತ್ರಗಳ ಬೇಡಿಕೆ ನೀಡಲು

(D) ಪ್ರಬುದ್ಧ ಭಾರತ ಮತ್ತು ಮೂಕನಾಯಕ ಪತ್ರಿಕೆಗಳನ್ನು ಹೊರಡಿಸಲು

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 × 1 = 8**

9. ನಮ್ಮ ದೇಶದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಪ್ರದೇಶ ಯಾವುದು ?

10. ಹೆಣ್ಣು ಭ್ರೂಣಹತ್ಯೆ ಎಂದರೇನು ?

11. ಬ್ಯಾಂಕಿನ ಯಾವ ಖಾತೆಯಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾಗಿದೆ ?

12. ಅಧಿಕಾರದ ವಿಕೇಂದ್ರೀಕರಣ ಏಕೆ ಬೇಕು ?

13. ನಮ್ಮ ಸಂವಿಧಾನದ ಯಾವ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸುತ್ತದೆ ?

14. ವುಡ್ರೋವಿಲ್ಸನ್ನರ ಪ್ರಕಾರ ಸಾರ್ವಜನಿಕ ಆಡಳಿತ ಎಂದರೇನು ?

15. ತೀನ್ ಮೂರ್ತಿ ಹೈಫಾ ಚೌಕ ಎಲ್ಲಿ ಕಂಡುಬರುತ್ತದೆ ?

16. 'ಭಾರತದ ಉಕ್ಕಿನ ಮನುಷ್ಯ' ಎಂದು ಕರೆಯಲ್ಪಡುವವರು ಯಾರು ?

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : **8 × 2 = 16**

17. ಲಿಂಗತ್ವ ಅಲ್ಪಸಂಖ್ಯಾತರ ತಾರತಮ್ಯವನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳಾವುವು ?

**ಅಥವಾ**

ಯುನೆಸ್ಕೋದ ಕಾರ್ಯಗಳಾವುವು ?

18. ಜನಮಂದೆಯು ದೊಂಬಿಗಿಂತ ಹೇಗೆ ಭಿನ್ನವಾಗಿದೆ ?

**ಅಥವಾ**

ಬಾಲ್ಯ ವಿವಾಹವನ್ನು ನಾವು ಹೇಗೆ ತಡೆಗಟ್ಟಬಹುದು ?

19. ಬಕ್ಸಾರ್ ಕದನವು ಭಾರತದಲ್ಲಿ ಬ್ರಿಟಿಷರನ್ನು ಬಂಗಾಳದ ನಿಜವಾದ ಒಡೆಯರನ್ನಾಗಿ ಹೇಗೆ ಮಾಡಿತು ?

20. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು ?

21. ಜಿ.ಐ.ಎಸ್. ಮತ್ತು ಜಿ.ಪಿ.ಎಸ್.ಗಳ ನಡುವಿನ ವ್ಯತ್ಯಾಸಗಳೇನು ?

22. ಇಸ್ರೋದ ಮಹತ್ವದ ಸಾಧನೆಗಳಾವುವು ?

23. ವಸತಿಹೀನರಿಗೆ ಸರ್ಕಾರವು ಕೈಗೊಂಡಿರುವ ವಸತಿ ಯೋಜನೆಗಳನ್ನು ಹೆಸರಿಸಿ.

24. ಉದ್ಯಮಶೀಲತೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ. ಹೇಗೆ ?

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

25. ಸ್ವಾಮಿ ದಯಾನಂದ ಸರಸ್ವತಿಯವರ ಸಾಮಾಜಿಕ ಸುಧಾರಣೆಗಳನ್ನು ವಿವರಿಸಿ.

**ಅಥವಾ**

ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ವಿವರಿಸಿ.

26. ಅರಣ್ಯಗಳು ಬಹು ಉಪಯುಕ್ತವಾದ ಸಂಪನ್ಮೂಲಗಳಾಗಿವೆ. ಸಮರ್ಥಿಸಿ.

**ಅಥವಾ**

ದೇಶದ ಅಭಿವೃದ್ಧಿಗೆ ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಅವಶ್ಯಕವಾಗಿವೆ. ಸಮರ್ಥಿಸಿ.

27. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳಾವುವು ?

**ಅಥವಾ**

ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳಾವುವು ?

28. ಬ್ಯಾಂಕಿನ ಕಾರ್ಯಗಳಾವುವು ?

**ಅಥವಾ**

ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು ?

29. ಎರಡನೇ ಮಹಾಯುದ್ಧದ ಪರಿಣಾಮಗಳೇನು ?

30. ಬ್ರಿಟಿಷರ ಭೂ ಕಂದಾಯ ನೀತಿಯು ಭಾರತೀಯ ರೈತರನ್ನು ಹೇಗೆ ಶೋಷಿಸಿತು ?

31. ಅನಕ್ಷರತೆಯ ನಿವಾರಣೆಗಾಗಿ ಜಾರಿಗೊಳಿಸಿರುವ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ.

32. ಬಾಲಕಾರ್ಮಿಕ ಸಮಸ್ಯೆಯ ಪರಿಣಾಮಗಳಾವುವು ?

33. ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟಬಹುದು ?

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು ವಿವರಿಸಿ.

**ಅಥವಾ**

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳನ್ನು ವಿವರಿಸಿ.

35. "ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರವು ಒಂದು ದಿಟ್ಟ ಮೈಲಿಗಲ್ಲು" ಸಮರ್ಥಿಸಿ.

36. ವಿಶ್ವಸಂಸ್ಥೆಯ ಸಾಧನೆಗಳನ್ನು ವಿವರಿಸಿ.

37. ಪ್ರವಾಹಗಳಿಗೆ ಕಾರಣಗಳನ್ನು ವಿವರಿಸಿ.

VI. 38. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ ಐದನ್ನು ಗುರುತಿಸಿ : **5 × 1 = 5**

a) ಕೋರಮಂಡಲ ತೀರ

b) $82^\circ\ 30'$ ಪೂರ್ವ ರೇಖಾಂಶ

c) ಹಿರಾಕುಡ್

d) ರಾಣಾ ಪ್ರತಾಪ ಸಾಗರ

e) ನರ್ಮದಾ ನದಿ

f) ಕನ್ಯಾಕುಮಾರಿ

g) ವಿಶಾಖಪಟ್ಟಣಂ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ಹಿಮಾಲಯ ಪರ್ವತಗಳ ಪ್ರಯೋಜನಗಳೇನು ? **5**

DO NOT WRITE ANYTHING HERE